## ಸಾಹಸದ ಎರಡನೇ ಹೆಜ್ಜೆ - ''ಸಹನಶೀಲತೆ'' (ಬ್ರಹ್ಮಾ ತಂದೆಯ ಜೀವನ ಚರಿತ್ರೆ)

ಇಂದು ಆಲ್ಮೈಟಿ ಅಥಾರಿಟಿ ತಂದೆಯು ತನ್ನ ಮೊದಲ ಶ್ರೇಷ್ಠ ರಚನೆಯನ್ನು ನೋಡುತ್ತಿದ್ದಾರೆ. ಮೊದಲ ರಚನೆಯು ಬ್ರಾಹ್ಮಣರ ರಚನೆಯಾಗಿದೆ. ಆ ಮೊದಲ ರಚನೆಯಲ್ಲಿಯೂ ಮೊದಲ ನಂಬರಿನವರೆಂದು ಬ್ರಹ್ಮರವರಿಗೆ ಹೇಳುತ್ತಾರೆ. ಮೊದಲ ರಚನೆಯ ಮೊದಲ ನಂಬರಿನವರಾಗಿರುವ ಕಾರಣ ಬ್ರಹ್ಮರವರಿಗೆ ಆದಿ ದೇವನೆಂದು ಹೇಳಲಾಗುತ್ತದೆ. ಇದೇ ಹೆಸರಿನಿಂದ ಈ ಅಬು ಪರ್ವತದಲ್ಲಿ ನೆನಪಾರ್ಥವೂ ಸಹ "ಆದಿ ದೇವ" ಎಂಬ ಹೆಸರಿನಿಂದಲೇ ಇದೆ. ಆದಿ ದೇವ ಅರ್ಥಾತ್ ಆದಿ ರಚಯಿತನೆಂದು ಹೇಳಲಾಗುತ್ತದೆ ಮತ್ತು ಜೊತೆ ಜೊತೆಗೆ ಆದಿ ದೇವ ಅರ್ಥಾತ್ ಹೊಸ ಸೃಷ್ಟಿಯ ಆದಿಯ ಮೊದಲ ನಂಬರಿನ ದೇವನಾಗಿದ್ದಾರೆ. ಮೊದಲ ದೇವಾತ್ಮ ಶ್ರೀಕೃಷ್ಣನ ರೂಪದಲ್ಲಿ ಬ್ರಹ್ಮರವರೇ ಆಗುತ್ತಾರೆ ಆದ್ದರಿಂದ ಹೊಸ ಸೃಷ್ಟಿಯ ಆದಿಯ ಆದಿ ದೇವನೆಂದು ಕರೆಯಲಾಗುತ್ತದೆ. ಸಂಗಮ ಯುಗದಲ್ಲಿಯೂ ಆದಿ ರಚನೆಯ ಮೊದಲ ನಂಬರ್ ಅರ್ಥಾತ್ ಆದಿ ದೇವನೆಂದಾದರೂ ಹೇಳಿ ಅಥವಾ ಬ್ರಾಹ್ಮಣ ಆತ್ಮರ ರಚಯಿತ ಬ್ರಹ್ಮರವರೆಂದಾದರೂ ಹೇಳಿ ಅಂದಾಗ ಸಂಗಮದಲ್ಲಿ ಮತ್ತು ಸೃಷ್ಟಿಯ ಆದಿಯಲ್ಲಿ ಎರಡೂ ಸಮಯಕ್ಕೆ ಆದಿಯಾಗಿದ್ದಾರೆ ಆದ್ದರಿಂದ ಆದಿ ದೇವನೆಂದು ಕರೆಯಲಾಗುವುದು.

ಬ್ರಹ್ಮರವರೇ ಆದಿ ಕರ್ಮಾತೀತ ಫರಿಶ್ತೆಯಾಗುತ್ತಾರೆ. ಬ್ರಹ್ಮಾ ಸೋ ಫರಿಶ್ತಾ ಮತ್ತು ಫರಿಶ್ತಾ ಸೋ ದೇವತಾ ಎಲ್ಲದರಲ್ಲಿ ನಂಬರ್ವನ್, ಈ ರೀತಿ ನಂಬರ್ವನ್ ಏಕಾದರು? ಯಾವ ವಿಧಿಯಿಂದ ನಂಬರ್ವನ್ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಂಡರು? ತಾವೆಲ್ಲಾ ಬ್ರಾಹ್ಮಣ ಆತ್ಮರು ಬ್ರಹ್ಮರವರನ್ನೇ ಫಾಲೋ ಮಾಡಬೇಕಾಗಿದೆ. ಏನನ್ನು ಫಾಲೋ ಮಾಡಬೇಕು? ಇದರ ಮೊದಲ ಹೆಜ್ಜೆ - "ಸಮರ್ಪಣತೆ" ಯಾಗಿದೆ. ಇದನ್ನಂತೂ ಮೊದಲೇ ತಿಳಿಸಿದ್ದೇವೆ. ಮೊದಲ ಹೆಜ್ಜೆಯಲ್ಲಿಯೂ ಎಲ್ಲಾ ರೂಪದಿಂದ ಸಮರ್ಪಣೆಯಾಗಿ ತೋರಿಸಿದರು. ಎರಡನೇ ಹೆಜ್ಜೆಯಾಗಿದೆ - "ಸಹನಶೀಲತೆ". ಯಾವಾಗ ಸಮರ್ಪಣೆ ಆದರೆಂದರೆ ತಂದೆಯಿಂದ ಸರ್ವಶ್ರೇಷ್ಠ ಆಸ್ತಿಯಂತೂ ಸಿಕ್ಕಿತು. ಆದರೆ ಪ್ರಪಂಚದವರಿಂದ ಏನು ಸಿಕ್ಕಿತು? ಎಲ್ಲರಿಗಿಂತ ಹೆಚ್ಚು ಗ್ಲಾನಿಯ ಮಳೆಯು ಯಾರ ಮೇಲೆ ಸುರಿಯಿತು? ಭಲೆ ತಾವಾತ್ಮರಿಗೂ ನಿಂದನೆಯಾಯಿತು ಅಥವಾ ಅತ್ಯಾಚಾರಗಳಾಯಿತು. ಆದರೆ ಹೆಚ್ಚಿನ ಕ್ರೋಧ ಅಥವಾ ಕೋಪವು ಬ್ರಹ್ಮರವರಿಗೇ ಸಿಗುತ್ತಿತ್ತು, ಲೌಕಿಕ ಜೀವನದಲ್ಲಿ ಯಾರು ಎಂದೂ ಒಂದು ಅಪ ಶಬ್ದವನ್ನು ಕೇಳಿರಲಿಲ್ಲ ಆದರೆ ಬ್ರಹ್ಮನಾದ ಮೇಲೆ ಅಪ ಶಬ್ಧಗಳನ್ನು ಕೇಳುವುದರಲ್ಲಿಯೂ ಇವರು ನಂಬರ್ವನ್ ಇದ್ದರು. ಎಲ್ಲರಿಗಿಂತ ಹೆಚ್ಚು ಸರ್ವರ ಸ್ನೇಹಿ ಜೀವನವನ್ನು ವ್ಯತೀತ ಮಾಡಿದರು ಆದರೆ ಲೌಕಿಕ ಜೀವನದಲ್ಲಿ ಎಷ್ಟು ಸರ್ವರಿಗೆ ಸ್ನೇಹಿಯಾಗಿದ್ದರೋ ಅಷ್ಟೇ ಅಲೌಕಿಕ ಜೀವನದಲ್ಲಿ ಸರ್ವರಿಗೆ ಶತ್ರುವಿನ ರೂಪದಲ್ಲಾದರು. ಮಕ್ಕಳ ಮೇಲೆ ಅತ್ಯಾಚಾರವಾಯಿತೆಂದರೆ ಸ್ವತಹ ಅದು ಪರೋಕ್ಷವಾಗಿ ತಂದೆಯ ಮೇಲೆ ಅತ್ಯಾಚಾರವಾಯಿತು ಆದರೆ ಸಹನಶೀಲತೆಯ ಗುಣದಿಂದ, ಸಹನಶೀಲತೆಯ ಧಾರಣೆಯಿಂದ ಮುಗುಳ್ನಗುತ್ತಾ ಇದ್ದರು, ಎಂದೂ ಬಾಡಿ ಹೋಗಲಿಲ್ಲ.

ಯಾರಾದರೂ ಪ್ರಶಂಸೆ ಮಾಡಿದಾಗ ಮುಗುಳ್ನಗುವುದು - ಇದಕ್ಕೆ ಸಹನಶೀಲತೆ ಎಂದು ಹೇಳುವುದಿಲ್ಲ. ಆದರೆ ಶತ್ರುವಾಗಿ ಕ್ರೋಧಿತರಾಗಿ ಅಪ ಶಬ್ದಗಳ ಮಳೆ ಸುರಿಸುವ ಸಮಯದಲ್ಲಿಯೂ ಸದಾ ಮುಗುಳ್ನಗುತ್ತಿರುವುದು ಸಂಕಲ್ಪ ಮಾತ್ರದಲ್ಲಿಯೂ ಬೇಸರವಾಗುವ ಚಿಹ್ನೆಗಳು ಚಹರೆಯಲ್ಲಿ ಕಂಡು ಬರಬಾರದು. ಅಂತಹವರಿಗೆ ಸಹನಶೀಲರೆಂದು ಹೇಳಲಾಗುತ್ತದೆ. ಶತ್ರುವನ್ನೂ ಸಹ ದಯಾ ಭಾವನೆಯಿಂದ ನೋಡುವುದು, ಮಾತನಾಡುವುದು, ಸಂಪರ್ಕದಲ್ಲಿ ಬರುವುದಕ್ಕೆ ಸಹನಶೀಲತೆಯೆಂದು ಹೇಳುತ್ತಾರೆ. ಸ್ಥಾಪನಾ ಕಾರ್ಯದಲ್ಲಿ, ಸೇವಾಕಾರ್ಯದಲ್ಲಿ ಕೆಲವೊಮ್ಮೆ ಚಿಕ್ಕ-ದೊಡ್ಡ ಬಿರುಗಾಳಿಗಳು ಬಂದವು. ಹೇಗೆ ನೆನಪಾರ್ಥ ಶಾಸ್ತ್ರಗಳಲ್ಲಿ ಮಹಾವೀರ ಹನುಮಂತನಿಗಾಗಿ ತೋರಿಸುತ್ತಾರೆ. ಅಷ್ಟು ದೊಡ್ಡ ಪರ್ವತವನ್ನೂ ಸಹ ಅಂಗೈಯಲ್ಲಿ ಒಂದು ಚೆಂಡಿನ ಸಮಾನ ತೆಗೆದುಕೊಂಡು ಬಂದನು ಎಂದು. ಹಾಗೆಯೇ ಎಷ್ಟೇ ದೊಡ್ಡ ಪರ್ವತದಂತಹ ಸಮಸ್ಯೆಯಿರಲಿ, ಬಿರುಗಾಳಿಯಿರಲಿ, ವಿಘ್ನವಿರಲಿ ಆದರೆ ಪರ್ವತ ಅರ್ಥಾತ್ ದೊಡ್ಡ ಮಾತನ್ನೂ ಚಿಕ್ಕ ಆಟದ ಗೊಂಬೆಯನ್ನಾಗಿ ಮಾಡಿ ಆಟದ ರೀತಿಯಲ್ಲಿ ಸದಾ ಪಾರು ಮಾಡಿದರು ಅಥವಾ ದೊಡ್ಡ ಬಾರಿ ಮಾತನ್ನೂ ಸಹ ಸದಾ ಹಗುರ ಮಾಡಿ ಸ್ವಯಂ ಕೂಡ ಹಗುರವಾಗಿದ್ದರು ಮತ್ತು ಅನ್ಯರನ್ನೂ ಹಗುರರನ್ನಾಗಿ ಮಾಡಿದರು - ಇದಕ್ಕೇ ಸಹನಶೀಲತೆ ಎಂದು ಹೇಳಲಾಗುತ್ತದೆ. ಚಿಕ್ಕ ಕಲ್ಲನ್ನು ಪರ್ವತ ಮಾಡುವುದಲ್ಲ ಆದರೆ ಪರ್ವತವನ್ನೂ ಚೆಂಡಿನ ಸಮಾನ ಮಾಡಿಕೊಂಡರು. ವಿಸ್ತಾರವನ್ನು ಸಾರದಲ್ಲಿ ತಂದರು - ಇದು ಸಹನಶೀಲತೆಯಾಗಿದೆ. ವಿಘ್ನಗಳನ್ನು, ಸಮಸ್ಯೆಗಳನ್ನು ತನ್ನ ಮನಸ್ಸಿನಲ್ಲಿ ಹಾಗೂ ಅನ್ಯರ ಮುಂದೆ ವಿಸ್ತಾರ ಮಾಡುವುದು ಎಂದರೆ ಅದನ್ನು ಪರ್ವತವನ್ನಾಗಿ ಮಾಡುವುದಾಗಿದೆ ಆದರೆ ಇವರು ವಿಸ್ತಾರದಲ್ಲಿ ಹೋಗದೇ "ನತಿಂಗ್ ನ್ಯೂ" ಎಂಬ ಫುಲ್ಸ್ಟಾಪ್ನಿಂದ ಬಿಂದುವನ್ನಿಟ್ಟು ಬಿಂದುವಾಗಿ ಮುಂದುವರೆದರು. ಇದಕ್ಕೆ ವಿಸ್ತಾರವನ್ನು ಸಾರದಲ್ಲಿ ತರುವುದೆಂದು ಹೇಳುತ್ತಾರೆ. ಸಹನಶೀಲ ಶ್ರೇಷ್ಠ ಆತ್ಮನು ಸದಾ ಜ್ಞಾನ-ಯೋಗದ ಸಾರದಲ್ಲಿ ಸ್ಥಿತರಾಗಿ ಇಂತಹ ವಿಸ್ತಾರವನ್ನು, ಸಮಸ್ಯೆಯನ್ನು, ವಿಘ್ನಗಳನ್ನೂ ಸಹ ಸಾರದಲ್ಲಿ ತರುತ್ತಾರೆ. ಹೇಗೆ ಇದನ್ನು ಬ್ರಹ್ಮಾ ತಂದೆಯು ಮಾಡಿದರು. ಹೇಗೆ ಉದ್ದವಾದ ರಸ್ತೆಯನ್ನು ಪಾರು ಮಾಡುವುದರಲ್ಲಿ ಸಮಯ,

ಶಕ್ತಿಗಳು ಸಮಾಪ್ತಿಯಾಗುತ್ತವೆ ಅರ್ಥಾತ್ ಹೆಚ್ಚು ಉಪಯೋಗಿಸಬೇಕಾಗುತ್ತದೆ. ಹಾಗೆಯೇ ವಿಸ್ತಾರವು ಬಹಳ ಉದ್ದನೆಯ ರಸ್ತೆಯನ್ನು ಪಾರು ಮಾಡುವುದಾಗಿದೆ ಮತ್ತು ಸಾರವು ಕಾಲು ದಾರಿಯನ್ನು ಪಾರು ಮಾಡುವುದಾಗಿದೆ. ಎರಡನ್ನೂ ಪಾರು ಮಾಡುತ್ತಾರೆ ಆದರೆ ಕಾಲು ದಾರಿಯನ್ನು ಹಿಡಿಯುವವರು ಸಮಯ ಮತ್ತು ಶಕ್ತಿಗಳ ಉಳಿತಾಯವಾಗುವ ಕಾರಣ ನಿರಾಶರಾಗುವುದಿಲ್ಲ, ವ್ಯಾಕುಲರಾಗುವುದಿಲ್ಲ, ಸದಾ ಮೋಜಿನಲ್ಲಿ ಮುಗುಳ್ನಗುತ್ತಾ ಪಾರು ಮಾಡುತ್ತಾರೆ. ಇದಕ್ಕೆ ಸಹನಶೀಲತೆ ಎಂದು ಹೇಳಲಾಗುತ್ತದೆ.

ಸಹನಶೀಲತೆಯ ಶಕ್ತಿಯುಳ್ಳವರು ಈ ರೀತಿಯೂ ಆಗುತ್ತದೆಯೇ ಎಂದು ಎಂದಿಗೂ ಗಾಬರಿಯಾಗುವುದಿಲ್ಲ. ಸದಾ ಸಂಪನ್ನರಾಗಿರುವ ಕಾರಣ ಜ್ಞಾನದ ನೆನಪಿನ ಆಳದಲ್ಲಿ ಹೋಗುತ್ತಾರೆ. ಗಾಬರಿಯಾಗುವವರು ಎಂದೂ ಗಹರಾಯಿ (ಆಳ) ಯಲ್ಲಿ ಹೋಗಲು ಸಾಧ್ಯವಿಲ್ಲ. ಸಾರ ರೂಪದಲ್ಲಿ ತರುವವರು ಸದಾ ಬರ್ಪೂರ್ ಆಗಿರುತ್ತಾರೆ. ಆದ್ದರಿಂದ ಬರ್ಪೂರ್ ಸಂಪನ್ನ ವಸ್ತು ಗಂಭೀರವಾಗಿರುತ್ತದೆ, ವಿಸ್ತಾರದಲ್ಲಿರುವುದು ಖಾಲಿ-ಖಾಲಿಯಾಗಿರುತ್ತದೆ ಆದ್ದರಿಂದ ಖಾಲಿ ವಸ್ತುವು ಸದಾ ತುಳುಕುತ್ತಿರುತ್ತದೆ. ಆದ್ದರಿಂದ ವಿಸ್ತಾರದಲ್ಲಿ ಬರುವವರು ಇದೇಕೆ ಅದೇಕೆ, ಹೀಗಲ್ಲ ಹಾಗೆ, ಹೀಗಾಗಬಾರದು.... ಇಂತಹ ಸಂಕಲ್ಪಗಳಲ್ಲಿಯೂ ಬರುತ್ತಾರೆ ಮತ್ತು ವಾಣಿಯಲ್ಲಿಯೂ ಎಲ್ಲರ ಮುಂದೆ ಬರುತ್ತಾರೆ ಮತ್ತು ಯಾರು ಹದ್ದಿನಿಂದ ಹೆಚ್ಚು ತುಳುಕುವರೋ ಅವರು ಏನಾಗುವರು? ಸುಸ್ತಾಗಿ ಬಿಡುವರು. ತಾವೇ ತುಳುಕುವರು, ತಾವೇ ಜಿಗಿಯುವರು ಮತ್ತು ತಾವೇ ಸುಸ್ತಾಗುವರು. ಸಹನಶೀಲರು ಇವೆಲ್ಲಾ ಮಾತುಗಳಿಂದ ಪಾರಾಗುತ್ತಾರೆ ಆದ್ದರಿಂದ ಸದಾ ಮೋಜಿನಲ್ಲಿರುತ್ತಾರೆ. ತುಳುಕುವುದಿಲ್ಲ ಅರ್ಥಾತ್ ಜಿಗಿಯುವುದಿಲ್ಲ, ಹಾರುತ್ತಾರೆ.

ಎರಡನೇ ಹೆಜ್ಜೆ - "ಸಹನ ಶೀಲತೆ" ಇದನ್ನು ಬ್ರಹ್ಮಾ ತಂದೆಯು ನಡೆದು ತೋರಿಸಿದರು. ಸದಾ ಅಚಲ-ಅಟಲ ಸಹಜ ಸ್ವರೂಪದಲ್ಲಿ ಮೋಜಿನಲ್ಲಿದ್ದರು, ಪರಿಶ್ರಮದಿಂದಲ್ಲ. ಇದನ್ನು 14 ವರ್ಷ ತಪಸ್ಸು ಮಾಡಿದ ಮಕ್ಕಳು ಅನುಭವ ಮಾಡಿದಿರಿ. 14 ವರ್ಷಗಳೆನಿಸಿತೇ ಅಥವಾ ಕೆಲವು ಘಳಿಗೆಗಳು ಎನಿಸಿತೆ? ಮೋಜಿನಲ್ಲಿದ್ದಿರೋ ಅಥವಾ ಪರಿಶ್ರಮವೆನಿಸಿತೋ? ಹೇಗೆ ಸ್ಥೂಲ ಪರಿಶ್ರಮದ ಪರೀಕ್ಷೆಯನ್ನೂ ಸಹ ತಂದೆಯು ತೆಗೆದುಕೊಂಡರು. ಬಹಳ ಸುಖವಾಗಿ ಬೆಳೆಯುವವರೆಲ್ಲಿ ಮತ್ತು ಬೆರಣಿಯನ್ನು ತಟ್ಟುವುದೆಲ್ಲಿ! ಮೆಕಾನಿಕ್ ಕೆಲಸವನ್ನೂ ಕಲಿಸಿದರು. ಚಪ್ಪಲಿಯನ್ನೂ ಹೊಲಿಸಿದರು, ಮಾಲಿಯನ್ನಾಗಿಯೂ ಮಾಡಿದರು ಆದರೆ ಪರಿಶ್ರಮವೆನಿಸಿತೆ ಅಥವಾ ಮೋಜಿನ ಅನುಭವವಾಯಿತೆ? ಎಲ್ಲವನ್ನೂ ಪಾರು ಮಾಡಿದರು ಆದರೆ ಸದಾ ಮೋಜಿನ ಜೀವನದ ಅನುಭವವಿತ್ತು. ಯಾರು ತಬ್ಬಿಬ್ಬಾದರೋ ಅವರು ಹೊರಟು ಹೋದರು ಮತ್ತು ಯಾರು ಮೋಜಿನಲ್ಲಿದ್ದರೋ ಅವರು ಅನೇಕರಿಗೆ ಮೋಜಿನ ಜೀವನದ ಅನುಭವ ಮಾಡಿಸುತ್ತಿದ್ದಾರೆ. ಈಗಲೂ ಒಂದುವೇಳೆ ಅದೇ 14 ವರ್ಷದ ಕಾರ್ಯಕ್ರಮವನ್ನು ಪುನರಾವರ್ತಿಸಿದರೆ ಇಷ್ಟವಿದೆಯಲ್ಲವೆ. ಈಗಂತೂ ಸೇವಾಕೇಂದ್ರದಲ್ಲಿ ಒಂದುವೇಳೆ ಚಿಕ್ಕ ಸ್ಥೂಲ ಕೆಲಸವನ್ನು ಮಾಡಬೇಕಾದರೂ ಸಹ ನಾವು ಈ ಕೆಲಸಕ್ಕಾಗಿ ಇದ್ದೇವೆಯೇ? ಇದಕ್ಕಾಗಿಯೇ ಸನ್ಯಾಸ ಮಾಡಿದೆವೇ? ಎಂದು ಯೋಚಿಸುತ್ತಾರೆ. ಮೋಜಿನಿಂದ ಜೀವನವನ್ನು ಜೀವಿಸುವುದಕ್ಕೇ ಬ್ರಾಹ್ಮಣ ಜೀವನವೆಂದು ಹೇಳಲಾಗುತ್ತದೆ. ಭಲೆ ಸ್ಥೂಲ ಸಾಧಾರಣ ಕೆಲಸವೇ ಆಗಿರಲಿ ಆದರೆ ಸಾವಿರಾರು ಜನರ ಸಭೆಯ ಮಧ್ಯದಲ್ಲಿ ಸ್ಟೇಜಿನ ಮೇಲೆ ಭಾಷಣ ಮಾಡುವುದಿರಲಿ, ಎರಡನ್ನೂ ಮೋಜಿನಿಂದ ಮಾಡಬೇಕು. ಇದಕ್ಕೇ ಮೋಜಿನ ಜೀವನವನ್ನು ಜೀವಿಸುವುದೆಂದು ಹೇಳಲಾಗುತ್ತದೆ. ತಬ್ಬಿಬ್ಬಾಗಬೇಡಿ - ನಾವಂತೂ ಸಮರ್ಪಣೆಯಾಗುವುದು ಎಂದರೆ ಇದೆಲ್ಲವನ್ನೂ ಮಾಡಬೇಕಾಗುವುದೆಂದು ತಿಳಿದುಕೊಂಡಿರಲಿಲ್ಲ. ನಾನು ಶಿಕ್ಷಕಿಯಾಗಿ ಬಂದಿದ್ದೇನೆ, ಸ್ಥೂಲ ಕೆಲಸ ಮಾಡುವುದಕ್ಕಾಗಿ ಸನ್ಯಾಸ ಮಾಡಲಿಲ್ಲ. ಬ್ರಹ್ಮಾಕುಮಾರಿ ಜೀವನವು ಹೀಗಿರುತ್ತದೆಯೇ? ಇದಕ್ಕೆ ತಬ್ಬಿಬ್ಬಾಗುವ ಜೀವನವೆಂದು ಹೇಳಲಾಗುತ್ತದೆ.

ಬ್ರಹ್ಮಾಕುಮಾರಿಯಾಗುವುದು ಅರ್ಥಾತ್ ಹೃದಯದ ಮೋಜಿನಲ್ಲಿರುವುದು, ಸ್ಥೂಲ ಮೋಜಿನಲ್ಲಿರುವುದಲ್ಲ. ಹೃದಯದ ಮೋಜಿನಿಂದ ಯಾವುದೇ ಪರಿಸ್ಥಿತಿಯಲ್ಲಿ, ಯಾವುದೇ ಕಾರ್ಯದಲ್ಲಿ ತಬ್ಬಿಬ್ಬಾಗುವುದನ್ನೂ ಸಹ ಮೋಜಿನಲ್ಲಿ ಪರಿವರ್ತಿಸಿಕೊಳ್ಳುತ್ತೀರಿ ಮತ್ತು ಹೃದಯದಿಂದ ತಬ್ಬಿಬ್ಬಾಗುವವರು ಶ್ರೇಷ್ಠ ಸಾಧನಗಳಿದ್ದರೂ, ಸ್ಪಷ್ಟ ಮಾತಿದ್ದರೂ ಸಹ ಸದಾ ಸ್ವಯಂ ತಬ್ಬಿಬ್ಬಾಗಿರುವ ಕಾರಣ ಸ್ಪಷ್ಟ ಮಾತನ್ನೂ ಸಹ ತಬ್ಬಿಬ್ಬು ಮಾಡಿಬಿಡುವರು. ಒಳ್ಳೆಯ ಸಾಧನಗಳಿದ್ದರೂ ಸಹ ಸಾಧನಗಳಿಂದ ಆನಂದವನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಇದು ಹೇಗಾಗುವುದು, ಹೀಗಲ್ಲ ಹಾಗೆ ಆಗುವುದು. ಇದರಲ್ಲಿ ತಾನೂ ತಬ್ಬಿಬ್ಬಾಗುವರು, ಬೇರೆಯವರನ್ನೂ ತಬ್ಬಿಬ್ಬು ಮಾಡುತ್ತಾರೆ. ಹೇಗೆ ಹೇಳುತ್ತಾರಲ್ಲವೆ - "ಸೂತ್ರವು ಗಂಟಾದರೆ ಅದನ್ನು ಬಿಡಿಸುವುದು ಬಹಳ ಕಷ್ಟ" ಒಳ್ಳೆಯ ಮಾತಿನಲ್ಲಿಯೂ ತಬ್ಬಿಬ್ಬಾಗುವರು ಮತ್ತು ಗಾಬರಿಯಾಗುವ ಮಾತಿನಲ್ಲಿಯೂ ತಬ್ಬಿಬ್ಬಾಗುವರು ಏಕೆಂದರೆ ಅವರ ವೃತ್ತಿಯೂ ತಬ್ಬಿಬ್ಬಾಗಿದೆ, ಮನಸ್ಸು ಗೊಂದಲವಾಗಿದೆ ಆದ್ದರಿಂದ ವೃತ್ತಿಯ ಪ್ರಭಾವವು ಸ್ವತಹ ದೃಷ್ಟಿಯ ಮೇಲೆ ಮತ್ತು ದೃಷ್ಟಿಯ ಕಾರಣ ಸೃಷ್ಟಿಯೂ ಸಹ ಗೊಂದಲದಂತೆ ಕಾಣುವುದು. ಬ್ರಹ್ಮಾಕುಮಾರಿ ಜೀವನ ಅರ್ಥಾತ್ ಬ್ರಹ್ಮಾ ತಂದೆಯ ಸಮಾನ ಮೋಜಿನ ಜೀವನ ಆದರೆ ಇದಕ್ಕೆ ಆಧಾರವಾಗಿದೆ - ಸಹನಶೀಲತೆ ಅಂದಾಗ ಸಹನಶೀಲತೆಗೆ ಇಷ್ಟೊಂದು ವಿಶೇಷತೆಯಿದೆ. ಇದೇ ವಿಶೇಷತೆಯ ಕಾರಣ ಬ್ರಹ್ಮಾ ತಂದೆಯು ಸದಾ ಅಚಲ-ಅಟಲವಾಗಿದ್ದರು.

ಎರಡು ಪ್ರಕಾರದ ಸಹನಶೀಲತೆಯ ಪರೀಕ್ಷೆಗಳನ್ನು ತಿಳಿಸಿದೆವು - ಮೊದಲ ಪರೀಕ್ಷೆಯಾಗಿದೆ - ಮನುಷ್ಯರ ಮೂಲಕ ಅಪಶಬ್ಧ

ಅಥವಾ ಅತ್ಯಾಚಾರ. ಎರಡನೆಯದು - ಯಜ್ಞದ ಸ್ಥಾಪನೆಯಲ್ಲಿ ಬಂದಂತಹ ಭಿನ್ನ-ಭಿನ್ನ ವಿಘ್ನಗಳು. ಮೂರನೆಯದು - ಕೆಲವು ಬ್ರಾಹ್ಮಣ ಮಕ್ಕಳ ಮೂಲಕವೂ ಸಹ ವಿರೋಧಿಯಾಗುವ ಅಥವಾ ಚಿಕ್ಕ-ಪುಟ್ಟ ಮಾತುಗಳಲ್ಲಿ ಅಸಂತುಷ್ಟತೆಯಿಂದ ಎದುರಾದರು ಆದರೆ ಇದರಲ್ಲಿಯೂ ಸದಾ ಅಸಂತುಷ್ಟರನ್ನು ಸಂತುಷ್ಟ ಪಡಿಸುವ ಭಾವನೆಯಿಂದ ಅವರನ್ನು ಪರವಶರೆಂದು ತಿಳಿದು ಸದಾ ಕಲ್ಯಾಣದ ಭಾವನೆಯಿಂದ ಸಹನಶೀಲತೆಯ ಶಾಂತಿ ಶಕ್ತಿಯಿಂದ ಪ್ರತಿಯೊಬ್ಬರನ್ನೂ ಮುಂದುವರೆಸಿದರು. ವಿರೋಧ ಮಾಡುವವರಿಗೂ ಸಹ ಮಧುರತೆ ಮತ್ತು ಶುಭ ಭಾವನೆ ಮತ್ತು ಶುಭ ಕಾಮನೆಯಿಂದ ಸಹನಶೀಲತೆಯ ಪಾಠವನ್ನು ಓದಿಸಿದರು. ಯಾರು ಇಂದು ಎದುರಾಗುವರೋ ಅವರು ನಾಳೆ ಕ್ಷಮೆ ಯಾಚಿಸುತ್ತಾರೆ. ಅವರ ಮುಖದಿಂದಲೂ ಸಹ ಇದೇ ಮಾತು ಹೊರ ಬರುತ್ತದೆ - "ಬಾಬಾ ಅಂತೂ ಬಾಬಾ ಆಗಿದ್ದಾರೆ" ಇದಕ್ಕೇ ಸಹನಶೀಲತೆಯ ಮೂಲಕ ಫೇಲ್ಯೂ ಪಾಸ್ ಮಾಡಿ ವಿಘ್ನವನ್ನು ಪಾರು ಮಾಡುವುದೆಂದು ಹೇಳಲಾಗುತ್ತದೆ ಅಂದಾಗ ಎರಡನೇ ಹೆಜ್ಜೆಯನ್ನು ಕೇಳಿದಿರಿ - ಏತಕ್ಕಾಗಿ? ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡಿ. ಇದಕ್ಕೆ ಫಾಲೋ ಫಾದರ್ ಅರ್ಥಾತ್ ತಂದೆಯ ಸಮಾನರಾಗುವುದೆಂದು ಹೇಳಲಾಗುತ್ತದೆ. ಆಗಬೇಕೋ ಅಥವಾ ಕೇವಲ ದೂರದಿಂದ ನೋಡಬೇಕೋ? ಬಹದ್ದೂರರಾಗಿದ್ದೀರಲ್ಲವೆ. ಪಂಜಾಬ್, ಮಹಾರಾಷ್ಟ್ರ ಇಬ್ಬರೂ ಬಹದ್ದೂರರಾಗಿದ್ದೀರಿ. ಎಲ್ಲರೂ ಬಹದ್ದೂರರಾಗಿದ್ದಾರೆ. ದೇಶ-ವಿದೇಶದವರೆಲ್ಲರೂ ತಮ್ಮನ್ನು ಮಹಾವೀರರೆಂದು ಹೇಳುತ್ತಾರೆ. ಯಾರಿಗಾದರೂ ನೀವು ಕಾಲಾಳುವೆಂದರೆ ಒಪ್ಪುವರೇ? ಇದರಿಂದಲೇ ಸಿದ್ಧವಾಗುತ್ತದೆ - ಎಲ್ಲರೂ ತಮ್ಮನ್ನು ಮಹಾವೀರರೆಂದು ತಿಳಿಯುತ್ತೀರಿ. ಮಹಾವೀರ ಅರ್ಥಾತ್ ತಂದೆಯ ಸಮಾನ ಆಗುವುದು - ತಿಳಿಯಿತೇ? ಒಳ್ಳೆಯದು.

ದೇಶ-ವಿದೇಶದ ಸರ್ವ ತಂದೆಯ ಸಮಾನ, ಸದಾ ಬುದ್ಧಿಯಿಂದ ಸಮರ್ಪಿತ ಆತ್ಮರಿಗೆ, ಸದಾ ಪ್ರತೀ ಪರಿಸ್ಥಿತಿಯಲ್ಲಿ, ಪ್ರತೀ ವ್ಯಕ್ತಿಯೊಂದಿಗೆ ಸಹನಶೀಲರಾಗಿ ಪ್ರತೀ ದೊಡ್ಡ ಮಾತನ್ನೂ ಚಿಕ್ಕ ಮಾತನ್ನಾಗಿ ಸಹಜವಾಗಿ ಪಾರು ಮಾಡುವವರು, ಸದಾ ವಿಸ್ತಾರವನ್ನು ಸಾರದಲ್ಲಿ ತರುವವರು, ಸದಾ ಬ್ರಾಹ್ಮಣ ಜೀವನವನ್ನು ಮೋಜಿನ ಜೀವನವನ್ನು ಜೀವಿಸುವವರು, ಇಂತಹ ತಂದೆಯ ಸಮಾನರಾಗುವ ಮಹಾವೀರ ಶ್ರೇಷ್ಠಾತ್ಮಗಳಿಗೆ ಬಾಪ್ದಾದಾರವರ "ಸಮಾನ ಭವ"ದ ಸ್ನೇಹ ಸಂಪನ್ನ ನೆನಪು-ಪ್ರೀತಿ ಹಾಗೂ ನಮಸ್ತೆ.

ಪಾರ್ಟಿಯೊಂದಿಗೆ ವಾರ್ತಾಲಾಪ:

ಕುಮಾರರೊಂದಿಗೆ: ಕುಮಾರರ ವಿಶೇಷತೆ ಏನಾಗಿದೆ? ಕುಮಾರ ಜೀವನವು ಶ್ರೇಷ್ಠವಾದ ಜೀವನವಾಗಿದೆ ಏಕೆಂದರೆ ಪವಿತ್ರ ಜೀವನವಿದೆ ಮತ್ತು ಎಲ್ಲಿ ಪವಿತ್ರತೆಯಿದೆಯೋ ಅಲ್ಲಿ ಮಹಾನತೆಯಿದೆ. ಕುಮಾರ ಅರ್ಥಾತ್ ಶಕ್ತಿಶಾಲಿ, ಯಾವ ಸಂಕಲ್ಪವನ್ನು ಮಾಡುವರೋ ಅದನ್ನು ಮಾಡಬಲ್ಲರು. ಕುಮಾರ ಅರ್ಥಾತ್ ಸದಾ ಬಂಧನ ಮುಕ್ತರಾಗುವ ಹಾಗೂ ಅನ್ಯರನ್ನೂ ಮಾಡುವವರು. ಇಂತಹ ವಿಶೇಷತೆಯು ಇದೆಯಲ್ಲವೇ? ಯಾವ ಸಂಕಲ್ಪವನ್ನು ಮಾಡುವಿರಿ, ಅದನ್ನೇ ಕರ್ಮದಲ್ಲಿಯೂ ತರಬಹುದು. ಸ್ವಯಂ ತಾವೂ ಪವಿತ್ರವಾಗಿದ್ದು ಅನ್ಯರಿಗೂ ಪವಿತ್ರವಾಗಿರುವ ಮಹತ್ವವನ್ನು ತಿಳಿಸಬಹುದು. ನಮ್ಮಂತಹ ಪಾವನರು ಮತ್ತ್ಯಾರೂ ಆಗಲು ಸಾಧ್ಯವಿಲ್ಲ ಎಂದು ಬ್ರಹ್ಮಾಕುಮಾರರು ಚಾಲೆಂಜ್ ಮಾಡುವಿರಾ? ಏಕೆಂದರೆ ಪಾವನರನ್ನಾಗಿ ಮಾಡುವವರು ಸರ್ವಶಕ್ತಿವಂತ ಆಗಿದ್ದಾರೆ. ಪ್ರಪಂಚದವರು ಎಷ್ಟೇ ಪ್ರಯತ್ನ ಪಡಬಹುದು ಆದರೆ ತಮ್ಮಂತೆ ಪಾವನರಾಗಲು ಸಾಧ್ಯವಿಲ್ಲ. ತಾವು ಸಹಜವಾಗಿಯೇ ಪಾವನರಾಗಿ ಬಿಟ್ಟಿರಿ, ಸಹಜವೆನಿಸುತ್ತದೆ ಅಲ್ಲವೇ? ಅಥವಾ ಪ್ರಪಂಚದವರು ಇದನ್ನು ಅಸ್ವಾಭಾವಿಕ ಎಂದು ಹೇಳುವಂತೆ ಅನಿಸುತ್ತದೆಯೇ? ಕುಮಾರ ಎಂಬುದರ ಪರಿಭಾಷೆಯಾಗಿದೆ – 'ಚಾಲೆಂಜ್ ಮಾಡುವವರು, ಪರಿವರ್ತನೆ ಮಾಡಿ ತೋರಿಸುವವರು, ಅಸಂಭವವನ್ನು ಸಂಭವ ಮಾಡುವವರು'. ಪ್ರಪಂಚದವರು ತನ್ನ ಜೊತೆಗಾರರನ್ನು ಸಂಗ ದೋಷದಲ್ಲಿ ಕರೆದುಕೊಂಡು ಹೋಗುತ್ತಾರೆ ಮತ್ತು ತಾವು ತಂದೆಯ ಸಂಗದಲ್ಲಿ ಕರೆದುಕೊಂಡು ಬರುತ್ತೀರಿ. ಅವರು ತಮ್ಮ ಸಂಗದಲ್ಲಿ ತರುವುದಿಲ್ಲ, ತಂದೆಯ ಸಂಗದ ರಂಗನ್ನು ಹಾಕುವಿರಿ, ತಂದೆಯ ಸಮಾನರನ್ನಾಗಿ ಮಾಡುತ್ತೀರಿ. ಈ ರೀತಿ ಇದ್ದೀರಲ್ಲವೇ? ಒಳ್ಳೆಯದು!

2. ಕುಮಾರ ಅರ್ಥಾತ್ ಸದಾ ಅಚಲ-ಅಡೋಲ ಆಗಿರುವವರು, ಎಂತಹ ಪರಿಸ್ಥಿತಿಯೇ ಬರಲಿ ಆದರೆ ಏರುಪೇರು ಆಗುವವರಲ್ಲ. ಏಕೆಂದರೆ ತಮ್ಮ ಸಂಗಾತಿಯು ಸ್ವಯಂ ತಂದೆಯಾಗಿದ್ದಾರೆ. ಎಲ್ಲಿ ತಂದೆಯಿದ್ದಾರೆಯೋ ಅಲ್ಲಿ ಸದಾ ಅಚಲ-ಅಡೋಲವಾಗಿರುವಿರಿ. ಎಲ್ಲಿ ಸರ್ವಶಕ್ತಿವಂತನು ಇರುವರು ಅಲ್ಲಿ ಸರ್ವ ಶಕ್ತಿಗಳೂ ಇರುತ್ತವೆ. ಸರ್ವ ಶಕ್ತಿಗಳ ಮುಂದೆ ಮಾಯೆಯೇನೂ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಕುಮಾರ ಜೀವನ ಅರ್ಥಾತ್ ಸದಾ ಏಕರಸ ಸ್ಥಿತಿಯಲ್ಲಿ ಇರುವವರು, ಏರುಪೇರಿನಲ್ಲಿ ಬರುವುದಿಲ್ಲ. ಯಾರು ಏರುಪೇರುಗಳಲ್ಲಿ ಬರುತ್ತಾರೆಯೋ ಅವರು ಅವಿನಾಶಿ ರಾಜ್ಯಭಾಗ್ಯವನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಪ ಸ್ವಲ್ಪ ಸುಖ ಸಿಗಬಹುದು ಆದರೆ ಸದಾಕಾಲದ್ದಲ್ಲ ಆದ್ದರಿಂದ ಕುಮಾರ ಜೀವನ ಅರ್ಥಾತ್ ಸದಾ ಅಚಲ, ಏಕರಸ ಸ್ಥಿತಿಯಲ್ಲಿ ಸ್ಥಿತವಾಗಿರುವವರು. ಅಂದಮೇಲೆ ಏಕರಸ ಸ್ಥಿತಿಯಲ್ಲಿ ಇರುತ್ತೀರಾ ಅಥವಾ ಅನ್ಯ ಪ್ರಾಪ್ತಿಗಳಲ್ಲಿ ಬುದ್ಧಿಯು ಹೋಗುತ್ತದೆಯೇ? ಸರ್ವಪ್ರಾ ಪ್ತಿಗಳು ಒಬ್ಬ ತಂದೆಯ ಮೂಲಕ ಅನುಭವ ಮಾಡುವವರಿಗೆ ಏಕರಸ ಅರ್ಥಾತ್ ಅಚಲ-ಅಡೋಲವಾಗಿ ಇರುವವರೆಂದು ಹೇಳಲಾಗುತ್ತದೆ. ಈ ರೀತಿ ಆಗುವಂತಹ ಮಕ್ಕಳು ತಂದೆಯವರಿಗೆ ಪ್ರಿಯವಾಗುವರು.

ಅಂದಮೇಲೆ ಸದಾ ಇದನ್ನೇ ನೆನಪಿಟ್ಟುಕೊಳ್ಳಿರಿ - ನಾವು ಅಚಲ-ಅಡೋಲ ಆತ್ಮರು ಏಕರಸ ಸ್ಥಿತಿಯಲ್ಲಿ ಇರುವವರು ಆಗಿದ್ದೇವೆ.

ಮಾತೆಯರೊಂದಿಗೆ:

1. ಬಾಪ್ದಾದಾರವರು ಮಾತೆಯರಿಗಾಗಿ ಯಾವ ಸಹಜ ಮಾರ್ಗವನ್ನು ತಿಳಿಸಿದ್ದಾರೆ, ಅದರಿಂದ ಸಹಜವಾಗಿಯೇ ತಂದೆಯ ನೆನಪು ಮಾಡಲು ಸಾಧ್ಯವಾಗುವುದು, ಪರಿಶ್ರಮ ಪಡಬೇಕಾಗಿರುವುದಿಲ್ಲ? ನೆನಪನ್ನೂ ಸಹಜ ಮಾಡುವ ಸಾಧನವೇನಾಗಿದೆ? ಹೃದಯದಿಂದ "ನನ್ನ ಬಾಬಾ" ಎಂದು ಹೇಳಿರಿ. ಎಲ್ಲಿ "ನನ್ನ ಬಾಬಾ" ಎನ್ನುತ್ತೀರಿ ಅಲ್ಲಿ ಸಹಜವಾಗಿಯೇ ನೆನಪು ಬರುತ್ತದೆ. ಇಡೀ ದಿನದಲ್ಲಿಯೂ ನನ್ನದೇನು ಆಗಿರುತ್ತದೆಯೋ ಅದೇ ನೆನಪಿಗೆ ಬರುತ್ತದೆ ಅಲ್ಲವೆ. ಭಲೆ ವ್ಯಕ್ತಿಯಾಗಿರಲಿ, ವಸ್ತುವಾಗಿರಲಿ.... ಎಲ್ಲಿ ನನ್ನದೆನ್ನುವುದು ಇರುತ್ತದೆಯೋ ಅದೇ ನೆನಪು ಬರುತ್ತದೆ. ಒಂದುವೇಳೆ ಇದೇರೀತಿ ತಂದೆಯನ್ನು ನನ್ನವರೆಂದು ಹೇಳುತ್ತೀರಿ, ನನ್ನದೆಂದು ತಿಳಿಯುತ್ತೀರೆಂದರೆ ತಂದೆಯ ನೆನಪೂ ಸಹ ಬರುವುದು. ಅಂದಾಗ ತಂದೆಯನ್ನು ನೆನಪು ಮಾಡುವ ಸಹಜ ವಿಧಿಯಾಗಿದೆ - ಹೃದಯದಿಂದ ಹೇಳಿರಿ "ನನ್ನ ಬಾಬಾ", ಇದನ್ನು ಕೇವಲ ಮುಖದಿಂದ ನನ್ನದು-ನನ್ನದು ಎನ್ನುವುದಲ್ಲ, ಅಧಿಕಾರದಿಂದ ಹೇಳಬೇಕು. ಇದೇ ಸಹಜ ಪುರುಷಾರ್ಥವನ್ನು ಮಾಡುತ್ತಾ ಮುಂದುವರೆಯುತ್ತಾ ಸಾಗಿರಿ. ಸದಾಕಾಲವೂ ಈ ವಿಧಿಯಿಂದ ಸಹಜಯೋಗಿ ಆಗಿರಿ. ನನ್ನದೆಂದು ಹೇಳಿರಿ ಮತ್ತು ತಂದೆಯ ಖಜಾನೆಗಳ ಮಾಲೀಕರಾಗಿರಿ.

2. ಮಾತೆಯರು ಸದಾ ತಮ್ಮನ್ನು ಪದಮಾಪದಮ ಭಾಗ್ಯಶಾಲಿ ಎಂದು ತಿಳಿಯುತ್ತೀರಾ? ಮನೆಯಲ್ಲಿ ಕುಳಿತಿದ್ದಂತೆಯೇ ತಂದೆಯು ಸಿಕ್ಕಿದ್ದಾರೆಂದಾಗ, ಇದೆಷ್ಟು ಶ್ರೇಷ್ಠ ಭಾಗ್ಯವಾಗಿದೆ! ಪ್ರಪಂಚದವರಂತು ತಂದೆಯನ್ನು ಹುಡುಕುವುದಕ್ಕಾಗಿಯೇ ಹೋಗುತ್ತಾರೆ ಮತ್ತು ತಮಗಂತು ಮನೆಯಲ್ಲಿ ಕುಳಿತಿದ್ದಂತೆಯೇ ಸಿಕ್ಕಿದರು. ಅಂದಾಗ ಎಂದಾದರೂ ಇಷ್ಟು ಶ್ರೇಷ್ಠವಾದ ಭಾಗ್ಯವು ಪ್ರಾಪ್ತಿಯಾಗುವುದೆಂದು ಯೋಚಿಸಿದ್ದಿರಾ? ಮನೆಯಲ್ಲಿ ಕುಳಿತಿದ್ದಂತೆಯೇ ಭಗವಂತನು ಸಿಕ್ಕಿದರು ಎಂಬ ಗಾಯನವೇನಿದೆ.... ಇದು ಯಾರಿಗಾಗಿ ಇದೆ? ತಮಗಾಗಿಯೇ ಇದೆಯಲ್ಲವೆ. ಅಂದಮೇಲೆ ಇದೇ ಶ್ರೇಷ್ಠ ಭಾಗ್ಯವನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳುತ್ತಾ ಮುಂದುವರೆಯುತ್ತಾ ಸಾಗಿರಿ. "ವಾಹ್ ನನ್ನ ಶ್ರೇಷ್ಠ ಭಾಗ್ಯವೇ!"- ಖುಷಿಯ ಈ ಹಾಡನ್ನು ಹಾಡುತ್ತಿರಿ. ಖುಷಿಯ ಉಯ್ಯಾಲೆಯಲ್ಲಿ ತೂಗುತ್ತಿರಿ, ಖುಷಿಯಲ್ಲಿ ನರ್ತಿಸಿ ಮತ್ತು ಹಾಡುತ್ತಿರಿ.

3. ಶಕ್ತಿಯರಿಗೆ ಸದಾ ಯಾವ ಖುಷಿಯಿರುತ್ತದೆ? ಸದಾ ತಂದೆಯ ಜೊತೆಗೆ ಕಂಬೈಂಡ್ ಆಗಿದ್ದೇನೆ. ಶಿವ ಶಕ್ತಿಯ ಅರ್ಥವೇ ಆಗಿದೆ - ಕಂಬೈಂಡ್. ತಂದೆ ಮತ್ತು ತಾವು - ಇಬ್ಬರನ್ನು ಸೇರಿಸಿ "ಶಿವ-ಶಕ್ತಿ" ಎಂದು ಹೇಳಲಾಗುತ್ತದೆ. ಅಂದಮೇಲೆ ಯಾರು ಕಂಬೈಂಡ್ ಆಗಿದ್ದಾರೆಯೋ ಅವರನ್ನು ಯಾರೂ ಸಹ ಬೇರ್ಪಡಿಸಲು ಸಾಧ್ಯವಿಲ್ಲ. ಇಂತಹ ಖುಷಿಯಿರುತ್ತದೆಯೇ? ನಿರ್ಬಲ ಆತ್ಮನನ್ನು ತಂದೆಯವರು ಶಕ್ತಿಯರನ್ನಾಗಿ ಮಾಡಿ ಬಿಟ್ಟರು ಅಂದಮೇಲೆ ಸದಾ ಇದನ್ನೇ ನೆನಪಿಟ್ಟುಕೊಳ್ಳಿರಿ - ನಾವು ಕಂಬೈಂಡ್ ಆಗಿರುವಂತಹ ಅಧಿಕಾರಿ ಆಗಿ ಬಿಟ್ಟೆವು. ಮುಂಚೆ ಹುಡುಕಾಡುತ್ತಿದ್ದೆವು ಮತ್ತು ಈಗ ಅವರ ಸಂಗದಲ್ಲಿಯೇ ಇರುವವರು ಆಗಿದ್ದೇವೆ - ಈ ನಶೆಯು ಸದಾ ಇರಲಿ. ಮಾಯೆಯು ಬೇರ್ಪಡಿಸಲು ಎಷ್ಟೇ ಪ್ರಯತ್ನ ಪಡಲಿ ಆದರೆ ಶಿವ-ಶಕ್ತಿಯರ ಮುಂದೆ ಮಾಯೆಯು ಏನೂ ಮಾಡಲು ಸಾಧ್ಯವಿಲ್ಲ. ಒಂಟಿಯಾಗಿ ಇರುತ್ತೀರೆಂದರೆ ಮಾಯೆಯು ಬರುತ್ತದೆ, ಕಂಬೈಂಡ್ ಆಗಿರುತ್ತೀರೆಂದರೆ ಮಾಯೆಯು ಬರಲು ಸಾಧ್ಯವಿಲ್ಲ. ಹಾಗಾದರೆ ಈ ವರದಾನವನ್ನೇ ಸದಾ ನೆನಪಿಟ್ಟುಕೊಳ್ಳಿರಿ- "ನಾವು ಕಂಬೈಂಡ್ ಆಗಿರುವಂತಹ ಶಿವ-ಶಕ್ತಿಯರು ವಿಜಯಿ ಆಗಿದ್ದೇವೆ". ಒಳ್ಳೆಯದು.

ವರದಾನ**:** ವರದಾನ: ಗೊಂದಲರಾಗುವ ಬದಲು ಸಡಿಲಿಕೆಯಾದ ಸಂಪರ್ಕವನ್ನು ವ್ಯವಸ್ಥಿತವಾಗಿ ಮಾಡಿಕೊಳ್ಳುವಂತಹ ಸಮಸ್ಯಾ ಮುಕ್ತ ಭವ.

ಸರ್ವ ಸಮಸ್ಯೆಗಳಿಗೂ ಮೂಲ ಕಾರಣವೆಂದರೆ ಸಂಪರ್ಕದ ಸಡಿಲಿಕೆ ಆಗಿದೆ. ಇದಕ್ಕಾಗಿ ಕೇವಲ ಸಂಪರ್ಕವನ್ನು ವ್ಯವಸ್ಥಿತವಾಗಿ ಮಾಡಿಟ್ಟುಕೊಳ್ಳುತ್ತೀರೆಂದರೆ ಸ್ವತಹವಾಗಿಯೇ ಸರ್ವ ಶಕ್ತಿಗಳೆಲ್ಲವೂ ತಮ್ಮಮುಂದೆ-ಹಿಂದೆ ಸುತ್ತಾಡುತ್ತಿರುತ್ತವೆ. ಒಂದುವೇಳೆ ಸಂಪರ್ಕವನ್ನು ಜೋಡಣೆ ಮಾಡುವುದರಲ್ಲಿ ಒಂದೆರಡು ನಿಮಿಷವೇ ಹಿಡಿಸಿತೆಂದರೆ ಸಾಹಸವನ್ನು ಕಳೆದುಕೊಂಡು ಗೊಂದಲಕ್ಕೆ ಒಳಗಾಗಬಾರದು. ನಿಶ್ಚಯದ ಬುನಾದಿಯನ್ನು ಅಲುಗಾಡಿಸಬಾರದು. ನಾನು ಬಾಬಾರವರ ಮಗು, ಬಾಬಾ ನನ್ನವರು - ಇದರ ಆಧಾರದಿಂದ ಬುನಾದಿಯನ್ನು ಪರಿಪಕ್ವಗೊಳಿಸುವಿರೆಂದರೆ ಸಮಸ್ಯಾ ಮುಕ್ತರು ಆಗಿ ಬಿಡುವಿರಿ.

ಸ್ಲೋಗನ್**:** ಸ್ಲೋಗನ್: ಬೀಜರೂಪ ಸ್ಥಿತಿಯಲ್ಲಿ ಸ್ಥಿತರಾಗಿರುವುದು - ಇದೇ ಹಳೆಯ ಸಂಸ್ಕಾರಗಳನ್ನು ಪರಿವರ್ತನೆಗೊಳಿಸುವ ವಿಧಿ ಆಗಿದೆ.

ಸ್ವ-ಉನ್ನತಿಗಾಗಿ ಅವ್ಯಕ್ತ ಮುರುಳಿಯಿಂದ ಪ್ರಶ್ನೆಗಳು:

1. ಬ್ರಹ್ಮಾರವರನ್ನು ಆದಿ ದೇವನೆಂದು ಏಕೆ ಕರೆಯುತ್ತಾರೆ?

2. ಸಾರ ರೂಪದಲ್ಲಿ ತರುವವರು ಹೇಗಿರುತ್ತಾರೆ ಮತ್ತು ವಿಸ್ತಾರದಲ್ಲಿರುವವರು ಹೇಗಿರುತ್ತಾರೆ?

3. ಬ್ರಾಹ್ಮಣ ಜೀವನವೆಂದು ಯಾವುದಕ್ಕೆ ಹೇಳಲಾಗುತ್ತದೆ?

4. ಬ್ರಹ್ಮಾಕುಮಾರಿಯಾಗುವುದು ಎಂದರೇನು?

5. ಹೃದಯದ ಮೋಜಿನಲ್ಲಿರುವವರ ಮತ್ತು ಹೃದಯದಿಂದ ತಬ್ಬಿಬ್ಬಾಗುವುವರಲ್ಲಿ ಅಂತರವೇನು?

6. ತಂದೆಯು ಯಾವ ಎರಡು ಪ್ರಕಾರದ ಸಹನಶೀಲತೆಯ ಪರೀಕ್ಷೆಗಳನ್ನು ತಿಳಿಸಿದರು?

7. ವಿರೋಧ ಮಾಡುವವರಿಗೆ ಬಾಬಾರವರು ಯಾವ ರೀತಿ ಸಹನಶೀಲತೆಯ ಪಾಠವನ್ನು ಓದಿಸಿದರು?

8. ಕುಮಾರರ ಜೀವನವು ಶ್ರೇಷ್ಠವಾದ ಜೀವನ. ಏಕೆ?

9. ಬಾಬಾರವರು ಕುಮಾರ ಎಂಬುದರ ಪರಿಭಾಷೆಯನ್ನು ಏನೆಂದು ಹೇಳಿದರು?

10. ನೆನಪನ್ನು ಸಹಜ ಮಾಡುವ ಸಾಧನವೇನಾಗಿದೆ?